ಇ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

DISTRICT-WISE ALLOCATION UNDER CSS FOR USE OF PLASTIC IN AGRICULTURE

(Rs. in Lakhs)

Sl. no.	District	1994-95 Drip Installation in farmers field	1994-95 Drip Demon.	1995-96 Drip installation in farmers field	1995-96 Drip Demon.
a.					
1.	Bangalore (U)	20.15	0.30	22.5225	1.500
2.	Bangalore (R)	25.525	0.60	32.675	1.500
3.	Kolar	25.675	0.45	35.9285	3.000
4.	Tumkur	25.675	0.45	164.625	1.600
5.	Chitradurga	35.675	0.45	184.750	3.000
6.	Shimoga	30.000	1.125	160.4575	3.000
7.	Mysore	30.000	1.125	30.4825	3.000
8.	Kodagu	10.000	0.450	12.000	-
9.	Chickmagalur	20.000	1.125	44.400	1.500
10.	Dakshina Kannada	20.000	1.125	50.000	1.500
11.	Hassan	25.000	1.125	44.5625	1.500
12.	Mandya	13.000	1.125	17.250	3.000
13.	Belgaum	20.000	1.125	35.0475	1.500
14.	Bijapur	61.500	0.300	181.0775	1.500
15.	Dharwad	25.000	1.125	45.25	1.500
16.	Uttar Kannada	30.000	1.125	6.190	1.500
17.	Raichur	25.000	1.800	26.9525	3.500
18.	Bidar	15.000	0.450	5.6325	1.500
19.	Bellary	15.525	0.60	24.0625	3.000
20.	Gulbarga	15.000	1.800	32.250	4.000
	Total	487.725	17.775	1186.2100	45.000

ವಿಷಯ:- ರಾಜ್ಯದಲ್ಲಿರುವ ಸಹಕಾರಿ ಸಂಘಗಳ ಚುನಾವಣೆ ಮತ್ತು ನಾಮನಿರ್ದೇಶನ ಕುರಿತು.

1486 (1793) ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆ ಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಎಲ್ಲಾ ಹಂತದ ಸಹಕಾರಿ ಸಂಘಗಳಿಗೆ ಯಾವ ದಿನಾಂಕದೊಳಗೆ ಮುಗಿಸುವಂತೆ ಸರ್ಕಾರವು ಆದೇಶಿಸಿತ್ತು?

ಆ) ಇನ್ನು ಎಷ್ಟು ಸಹಕಾರ ಸಂಘಗಳು ಚುನಾವಣೆ ನಡೆಸಬೇಕಾಗಿದೆ?

ಇ) ಸಹಕಾರಿ ಸಂಘಗಳಿಗೆ ನಾಮನಿರ್ದೇಶನ ಮಾಡುವ ಪದ್ಧತಿಯನ್ನು ಕೈಬಿಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):-

ಅ) ದಿನಾಂಕ: 30–06–996 ರೊಳಗೆ ನಡೆಸಲು ಆದೇಶಿಸಿತ್ತು.

ಆ) 4,092 ಸಹಕಾರ ಸಂಘಗಳು ಚುನಾವಣೆ ನಡೆಸಬೇಕಾಗಿದೆ.

ಇ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 53 ಎ ಅನ್ನು ಕೈಬಿಟ್ಟು ಕಲಂ 29 ಕ್ಕೆ ತಿದ್ದುಪಡಿ ಮಾಡುವ ಉದ್ದೇಶವಿದೆ.

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯ ಸರ್ಕಾರಿ ಜಮೀನನ್ನು ಭಾರತ್ ಗೃಹ ನಿರ್ಮಾಣ ಸಹಕಾರ ಸಂಘದವರು ಕಬಳಿಸಿರುವ ಬಗ್ಗೆ.

1489 (1874) **ಶ್ರೀ ಎಂ. ಶ್ರೀನಿವಾಸ(ಉತ್ತರಹಳ್ಳಿ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯಲ್ಲಿ ಬರುವ ಉತ್ತರಹಳ್ಳಿ ಗ್ರಾಮ ಮತ್ತು ತುರಹಳ್ಳಿ ಗ್ರಾಮದ ಸರ್ಕಾರಿ ಜಮೀನನ್ನು ಭಾರತ ಗೃಹ ನಿರ್ಮಾಣ ಸಹಕಾರ ಸಂಘದ (ರಿ) ಇವರು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಅದು ಎಷ್ಟು ಎಕರೆ ಕಬಳಿಸಿದೆ?

ಆ) ಬಂದಿದ್ದರೆ ಇವರು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ವಾಪಸ್ಸು ಪಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಭಾರತ ಗೃಹ ನಿರ್ಮಾಣ ಸಹಕಾರ ಸಂಘದವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರ ಹಳ್ಳಿ ಹೋಬಳಿಯಲ್ಲಿನ ಉತ್ತರಹಳ್ಳಿ ಮತ್ತು ತುರುಹಳ್ಳಿ ಗ್ರಾಮಗಳಲ್ಲಿ ಒಟ್ಟು 68.19 ಎಕರೆ ಜಮೀನು ಭೂಸ್ವಾಧೀನವಾಗಿರುತ್ತೆ. ಈ ಪೈಕಿ ಕೆಲವು ಸರ್ವೆ ನಂಬರ್‌ಗಳಿರುವ ಫೂಟ್ ಖರಾಬ್ ಜಮೀನು ಸಹ ಒಳಪಟ್ಟಿದ್ದು ಅದನ್ನು ಸಹ ಭೂಸ್ವಾಧೀನಪಡಿಸಿಕೊಂಡು ಸದರಿ ಸಹಕಾರ ಸಂಘದ ವಶಕ್ಕೆ ಕೊಡಲಾಗಿದೆ.

ಆ) ಉದ್ಭವಿಸುವುದಿಲ್ಲ.